# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆಃ 06/2016

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಅಮರೇಶ್ ಎನ್. ಬಾರಕೇರ್ | ಪಿಡಬ್ಲ್ಯೂ.06 ಸಿಡಬ್ಲ್ಯೂ.01 |
| ತಂದೆಯ ಹೆಸರು | ಃ | ದೊಡ್ಡನರಸಪ್ಪ | |
| ವಯಸ್ಸು | ಃ | 62 ವರ್ಷ | ಪ್ರಮಾಣ ವಚನ ಬೋಧಿಸಿದ |
| ಉದ್ಯೋಗ | ಃ | ನಿವೃತ್ತ ಪೊಲೀಸ್ ಉಪಾಧಿಕ್ಷಕರು, | ದಿನಾಂಕಃ 04.09.2018 |
| ವಾಸಸ್ಥಳ | ಃ | ಸಿಲ್ವರ್ ಆರ್ಚರ್ಡ್, ಪ್ರತಿಭಾ ಕಾಲೋನಿ, ಕೆಲಗೇರಿ ರಸ್ತೆ, ಧಾರವಾಡ | |

## ಎಸ್‌ಪಿಪಿ ರವರಿಂದಃ ಮುಖ್ಯ ವಿಚಾರಣೆಃ

ದಿಃ 09.10.2013 ರಿಂದ 31.12.2014 ವರೆಗೆ ನಾನು ಚಿತ್ರದುರ್ಗ ಲೋಕಾಯುಕ್ತ ಕಚೇರಿಯಲ್ಲಿ ಡಿವೈ.ಎಸ್.ಪಿ ಅಂತ ಕೆಲಸ ಮಾಡಿರುತ್ತೇನೆ . ಆ ಸಮಯದಲ್ಲಿ ನನಗೆ ಬಂದಂತಹ ಆರೋಪಿಗೆ ಸಂಬಂಧಪಟ್ಟಂತಹ ಮಾಹಿತಿಯನ್ನು ಪಡೆದಿರುತ್ತೇನೆ . ಆ ವೇಳೆಯಲ್ಲಿ ಆರೋಪಿ 1 ರಾಜಣ್ಣ ಇವರು ಚಿತ್ರದುರ್ಗ ಪಟ್ಟಣದಲ್ಲಿ ಲೇಬರ್ ಇನ್ಸ್‌ಪೆಕ್ಟರ್ ಅಂತ ಕೆಲಸ ಮಾಡುತ್ತಿದ್ದರು . ಆರೋಪಿ 2 ಶ್ರೀಮತಿ ರಾಜೇಶ್ವರಿ ಇವರು ಆರೋಪಿ 1 ಇವರಿಗೆ ಹೆಂಡತಿಯಾಗಬೇಕು. ಆರೋಪಿ 1 ರಾಜಣ್ಣ ಸರ್ಕಾರಿ ನೌಕರನಾಗಿದ್ದು, ತನ್ನ ಆದಾಯಕ್ಕಿಂತ ಹೆಚ್ಚಿನ ಪ್ರಮಾಣದ ಆಸ್ತಿ ಹೊಂದಿದ್ದಾನೆ ಅಂತ ನನಗೆ ಮಾಹಿತಿ ಬಂದಿತ್ತು . ಆ ಪ್ರಕಾರ ನಾನು ಆರೋಪಿ 1 ರಾಜಣ್ಣ , ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿರುವಂತಹ ಆಸ್ತಿಗಳ ಬಗ್ಗೆ , ಆಸ್ತಿ ಮೌಲ್ಯದ ಬಗ್ಗೆ ಖರ್ಚುಗಳ ಬಗ್ಗೆ ನಾನು ಸೋರ್ಸ್ ವರದಿಯನ್ನು ದಿಃ 15.05.2014 ರಂದು ತಯಾರು ಮಾಡಿರುತ್ತೇನೆ . ಅದನ್ನು ನಿಪಿಃ 11 ಅಂತ ಗುರುತಿಸಲಾಯಿತು . ಸಾಕ್ಷಿ ಸಹಿಯನ್ನು ನಿಪಿಃ 11 ಎ ಅಂತ ಗುರುತಿಸಲಾಯಿತು .

2. ನನ್ನ ನಿಪಿಃ 11 ಸೋರ್ಸ್ ವರದಿ ಕಪ್ರಕಾರ ಆರೋಪಿ 1 ರಾಜಣ್ಣ ಇವರು ತಮ್ಮ ಬಳಿ ರೂ. 74,14,000/– ಮೊತ್ತ ದ ಆಸ್ತಿ ಹೊಂದಿದ್ದರು . ಅದರಲ್ಲಿ ರೂ. 24,14,365/– ಖರ್ಚು ಮಾಡಿದ ಬಗ್ಗೆ ತೋರಿಸಿದ್ದೇನೆ . ಅವೆರಡೂ ಸೇರಿಸಿದರೆ ರೂ. ಒಟ್ಟು 98,28,365/–

ಆಗುತ್ತದೆ . ಅದರಲ್ಲಿ ಆದಾಯ ರೂ. 51,00,000/– ಕಳೆದರೆ ಒಟ್ಟು ಅಸಮತೋಲನ ಆದಾಯ ಅಂದರೆ ಹೆಚ್ಚಿನ ಆಸ್ತಿ ಮೌಲ್ಯ ರೂ. 47,28,365/– ಬರುತ್ತದೆ. ಅಂದರೆ ಆರೋಪಿ ಸರ್ಕಾರಿ ನೌಕರನಾಗಿ ತನಗೆ ಗೊತ್ತಿರುವ ಆದಾಯಕ್ಕಿಂತ ಶೇ 92.71 ಪ್ರತಿಶತ ಹೆಚ್ಚಿನ ಆದಾಯ ಹೊಂದಿದ್ದಾನೆ . ಆ ಪ್ರಕಾರ ನಾನು ನಿಪಿಃ 11 ಸೋರ್ಸ್ ವರದಿ ಕೊಟ್ಟಿರುತ್ತೇನೆ . ನಿಪಿಃ 11 ಸೋರ್ಸ್ ವರದಿಯನ್ನು ಮಾನ್ಯ ಎಸ್.ಪಿ ಲೋಕಾಯುಕ್ತ , ಚಿತ್ರದುರ್ಗ ಇವರಿಗೆ ಕೊಟ್ಟಿರುತ್ತೇನೆ . ಸದರಿಯವರು ಮುಂದಿನ ಕ್ರಮ ಜರುಗಿಸಿರುತ್ತಾರೆ.

## ಆರೋಪಿತರ ಪರ ಶ್ರೀ ಎಸ್.ಹೆಚ್. ವಕೀಲರಿಂದಃ ಪಾಟೀ ಸವಾಲುಃ

3. ನನಗೆ ಬಂದಂತಹ ಮಾಹಿತಿಯನ್ನು ನಾನು ನಿಪಿಃ 11 ವರದಿಯಲ್ಲಿ ತೋರಿಸಿದ್ದೇನೆ. ಆರೋಪಿಗೆ ಸಂಬಂಧಪಟ್ಟಂತಹ ಹೂವಿನಹೊಳೆ ಗ್ರಾಮದ , ಈಶ್ವರಗೆರೆ ಗ್ರಾಮದ ಜಮೀನು ಪಹಣಿಗಳನ್ನು ನಾನು ಪಡೆದಿರುವುದಿಲ್ಲ . ಏಕೆಂದರೆ ಬೇರೆಯವರಿಗೆ ಗೊತ್ತಾಗುತ್ತದೆ ಅಂತ ನಾನು ಕಚೇರಿಗೆ ಹೋಗಿ ಪಹಣಿ ಪಡೆದಿಲ್ಲ . ಅದೇ ರೀತಿ ಚಿತ್ರದುರ್ಗ ಯಂಗಮ್ಮನಕಟ್ಟೆ ನಗರದ ಸೈಟು , ಮನೆ ಆಸ್ತಿಗೆ ಸಂಬಂಧಪಟ್ಟಂತಹ ಟೌನ್ ಪಂಚಾಯಿತಿ ಯಿಂದ ದಾಖಲೆ ಪಡೆದಿರುವುದಿಲ್ಲ . ಏಕೆಂದರೆ ಬೇರೆಯವರಿಗೆ ಗೊತ್ತಾಗುತ್ತದೆ ಅಂತ ನಾನು ಪಡೆದಿರುವುದಿಲ್ಲ. ಎಷ್ಟು ಗಂಟೆಗೆ ನಿಮಗೆ ಮಾಹಿತಿ ಬಂದಿತು ಅಂತ ಕೇಳಿದ ಪ್ರಶ್ನೆ ಸಮಂಜಸವಾಗಿರುವುದಿಲ್ಲ ಮತ್ತು ಇದು ಡಿ .ಎ ಕೇಸ್ ಆಗಿರುವುದರಿಂದ ಆ ಪ್ರಶ್ನೆಯನ್ನು ತಿರಸ್ಕರಿಸಲಾಯಿತು . ನಿಪಿಃ 11 ವರದಿ ಕೊಡುವುದಕ್ಕಿಂತ 15 ದಿವಸ ಮೊದಲು ನನಗೆ ಆರೋಪಿ ಆಸ್ತಿ ಬಗ್ಗೆ ಮಾಹಿತಿ ಬಂದಿತ್ತು .

4. ನಾನು ಮೌಖಿಕ ಮಾಹಿತಿ ಪಡೆದ ನಂತರ ಸುಮಾರು 15 ದಿವಸ ಕಾಲ ಗೌಪ್ಯವಾಗಿ ವಿಚಾರಣೆ ಮಾಡಿ ನಿಪಿಃ 11 ವರದಿ ಕೊಟ್ಟಿರುತ್ತೇನೆ . ಆ ಕೇಸಿನಲ್ಲಿ ನಾನು ತನಿಖೆ ಮಾಡಿರುವುದಿಲ್ಲ . ಸಂಬಂಧಪಟ್ಟ ಕಚೇರಿಗಳಲ್ಲಿ ನಾವು ಬೇರೆಯವರಿಗೆ ಗೊತ್ತಾಗಲಾರದ ಹಾಗೆ ಮೌಖಿಕ ಮಾಹಿತಿ ಸಂಗ್ರಹಿಸಿದ್ದೇನೆ . ಅಂದರೆ ಚಿತ್ರದುರ್ಗ ಸಿಎಂ.ಸಿ ಕಚೇರಿ , ಆರ್.ಟಿ.ಒ. ಕಚೇರಿ, ಹಿರಿಯೂರು ತಹಶೀಲ್ದಾರ್ ಕಚೇರಿ , ಹಿರಿಯೂರು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ

ವಿಚಾರಿಸಿದ್ದೇನೆ . ಆ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿ ಅಂದರೆ ತಹಶೀಲ್ದಾರ್ , ಸಬ್ ರಿಜಿಸ್ಟ್ರಾರ್ ಇವರನ್ನು ವಿಚಾರಣೆ ಮಾಡಿರುವುದಿಲ್ಲ . ಅದೇ ರೀತಿ ಸಂಬಂಧಪಟ್ಟ ಅಧಿಕಾರಿಗಳಿಗೆ ದಾಖಲೆ ಕೇಳಿ ನಾನು ಲಿಖಿತ ಅರ್ಜಿ ಕೊಟ್ಟಿರುವುದಿಲ್ಲ . ಅದೇ ರೀತಿ ಅವರನ್ನು ಸಂಪರ್ಕಿಸುವ ಕಾಲಕ್ಕೆ ಅವರಿಗೆ ಲಿಖಿತ ಅರ್ಜಿ ಕೊಟ್ಟು ಅನುಮತಿ ಪಡೆದಿರುವುದಿಲ್ಲ. ನನಗೆ ಬಂದಂತಹ ಮಾಹಿತಿಯನ್ನು ನಾನು ಠಾಣಾ ಡೈರಿಯಲ್ಲಿ ಬರೆದಿರುವುದಿಲ್ಲ . ಏಕೆಂದರೆ ಮಾಹಿತಿ ಬೇರೆಯವರಿಗೆ ಗೊತ್ತಾಗುತ್ತದೆ ಅಂತ ಸುಮ್ಮನಿದ್ದೆನು . ಎಫ್ .ಐ .ಆರ್ ಮಾಡುವುದಕ್ಕಿಂತ ಪೂರ್ವದಲ್ಲಿ ಮಾಹಿತಿ ಸಂಗ್ರಹಿಸಲು ನಮಗೆ ಅಧಿಕಾರ ಇದೆ . ಆ ರೀತಿ ಅಧಿಕಾರ ಇಲ್ಲ ಎನ್ನುವುದು ಸುಳ್ಳು .

5. ನಿಪಿಃ 11 ಪುಟ 4 ರಲ್ಲಿ ಆಸ್ತಿಯ ಮೊತ್ತ , ಖರ್ಚನ್ನು ಅಂದಾಜು ಮೇರೆಗೆ ತೋರಿಸಿದ್ದೇನೆ . ನಿಪಿಃ 11 ಪುಟ 2 ರಲ್ಲಿ ನಮೂದಿಸಿದ ಹೂವಿನಹೊಳೆ ಗ್ರಾಮದ ಸರ್ವೆ ನಂ. 62/2 ಜಮೀನನ್ನು ಈರಣ್ಣ , ರಾಮಣ್ಣ ಖರೀದಿ ಮಾಡಿದ್ದಾರೆ . ಆ ಖರೀದಿ ಪತ್ರಕ್ಕೆ ಆರೋಪಿ–1 ರಾಜಣ್ಣ ಎಷ್ಟು ಹಣ ತೊಡಗಿಸಿದ್ದಾನೆ ಅನ್ನುವುದರ ಬಗ್ಗೆ ನಾನು ದಾಖಲೆ ಸಂಗ್ರಹಿಸಿಲ್ಲ . ಅದೇ ರೀತಿ ಚಿತ್ರದುರ್ಗದ ನಗರದ ಯಂಗಮ್ಮನ ಕಟ್ಟೆ ಬಡಾವಣೆಯಲ್ಲಿರುವ ಆರೋಪಿ 2 ರಾಜೇಶ್ವರಿ ಹೆಸರಿನಲ್ಲಿರುವ ಸೈಟು ಖರೀದಿ ಮಾಡಿದ ಬಗ್ಗೆ , ಅವನು ಇಲಾಖೆಯ ಅನುಮತಿ ಪಡೆದ ಬಗ್ಗೆ ನಾನು ದಾಖಲೆ ಸಂಗ್ರಹಿಸಿಲ್ಲ . ನಿಪಿಃ 11 ಪುಟ 4 ರಲ್ಲಿ ನಮೂದಿಸಿದ ಆದಾಯದ ಮೊತ್ತ , ಖರ್ಚು ಮೊತ್ತ , ಆಸ್ತಿ ಮೊತ್ತ ಅಂದಾಜು ಆಗಿರುತ್ತದೆ . ಅದೇ ರೀತಿ ಅಸಮತೋಲನ ಮೊತ್ತ ಅಂದಾಜು ಹೇಳಿರುತ್ತೇನೆ .

6. ಆರೋಪಿ–1 ರಾಜಣ್ಣ , ಅವನ ಸಹೋದರರು ಒಕ್ಕಲುತನ ಮನೆತನದಿಂದ ಬಂದಿದ್ದಾರೆ ಎನ್ನುವುದು ನಿಜ . ಅವರ ಕೃಷಿ ಆದಾಯ ವರ್ಷಕ್ಕೆ ಎಷ್ಟು ಬರುತ್ತದೆ ಅಂತ ನಾನು ಅಂದಾಜು ಕೇಳಿದ್ದೇನೆ . ನಿಖರವಾಗಿ ಗೊತ್ತಿಲ್ಲ . ನಾನು ಸರಿಯಾಗಿ ವಿಚಾರಿಣೆ ಮಾಡಲಾರದೇ ನಿಪಿಃ 11 ಸೋರ್ಸ್ ವರದಿಯನ್ನು ತಪ್ಪಾಗಿ ಕೊಟ್ಟಿದ್ದೇನೆ ಎನ್ನುವುದು ಸುಳ್ಳು . ನಾನು ಸರಿಯಾಗಿ ಖಚಿತ ಮಾಹಿತಿ ಪಡೆದಿಲ್ಲ ಎನ್ನುವುದು ಸುಳ್ಳು . ನಿಪಿಃ 11 ವರದಿಯಲ್ಲಿ ತೋರಿಸಿದ ಕಾರ್ ನಂ ಕೆಎ–16–ಎಂ –6346 , ಮೋಟಾರ್ ಸೈಕಲ್ ನಂ ಕೆಎ–16–

ಡಬ್ಲ್ಯೂ–8697 ಇವುಗಳನ್ನು ನಾನು ವರದಿ ಕೊಡುವುದಕ್ಕಿಂತ ಪೂರ್ವದಲ್ಲಿ ಖುದ್ದಾಗಿ ನೋಡಿಲ್ಲ . ಆದರೆ ಅವುಗಳ ಬಗ್ಗೆ ಮಾಹಿತಿ ಪಡೆದಿದ್ದೇನೆ . ಆರ್.ಟಿ. ಒ ಕಚೇರಿಯಲ್ಲಿ ನಾನು ಲಿಖಿತ ಅರ್ಜಿ ಕೊಟ್ಟು ಮಾಹಿತಿ ಪಡೆದಿರುವುದಿಲ್ಲ . ಆರೋಪಿ ವಾಸವಾಗಿದ್ದ ಚಿತ್ರದುರ್ಗ ನಗರದ ಯಂಗಮ್ಮನಕಟ್ಟೆ ಮನೆಯ ಹತ್ತಿರ ನಾನು ದೂರದಿಂದ ಹೋಗಿ ನೋಡಿದ್ದೇನೆ . ಆ ಮಾಹಿತಿಯನ್ನು ನಾನು ನಮ್ಮ ಇಲಾಖೆಯ ಸಿಬ್ಬಂದಿ ಮುಖಾಂತರ ಪಡೆದಿದ್ದೇನೆ . ಆ ಮನೆಯ ಬೆಲೆಯನ್ನು ನಾನು ಹೆಚ್ಚಿಗೆ ತೋರಿಸಿದ್ದೇನೆ ಎನ್ನುವುದು ಸುಳ್ಳು .

7. ಆರೋಪಿತರಿಗೆ ನಾನು ಹೇಳುವಂತೆ ಹೆಚ್ಚಿನ ಮೊತ್ತದ ಆಸ್ತಿ ಇರುವುದಿಲ್ಲ ಎನ್ನುವುದು ಸುಳ್ಳು . ಅದೇ ರೀತಿ ಆರೋಪಿತರಿಗೆ ನಾನು ಹೇಳುವ ಹಾಗೆ ರೂ. 47,28,365/– ಮೊತ್ತದ ಹೆಚ್ಚಿನ ಆದಾಯ ಇರುವುದಿಲ್ಲ ಎನ್ನುವುದು ಸುಳ್ಳು . ಯಾವುದೇ ಸಾಕ್ಷಿ ಆಧಾರ ಇಲ್ಲದೇ ಇದ್ದರೂ ಕೂಡ ತಪ್ಪಾಗಿ ಸೋರ್ಸ್ ವರದಿ ಕೊಟ್ಟಿದ್ದೇನೆ ಎನ್ನುವುದು ಸುಳ್ಳು .

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿತ್ರದುರ್ಗ.**